ಇ) ಈ ರೀತಿ ಸರ್ಕಾರದ ನೀತಿ ನಿಯಮಗಳ ಉಲ್ಲಂಘನೆಯಾದ ಬಗ್ಗೆ ಸಹಕಾರ ಸಂಘಗಳ ಕಾಯ್ದೆ ೧೯೫೯ ಸೆಕ್ಷನ್ ೬೪ರ ಅನ್ವಯ ವಿಚಾರಣೆ ನಡೆಸಲಾಗಿದ್ದು ಸದರಿ ವಿಚಾರಣಾ ಪರದಿಯ ಶಿಫಾರಸ್ಸಿನನ್ವಯ ಹಾಸನ ಹಾಲು ಒಕ್ಕೂಟದ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಹಾಸನ ಜಿಲ್ಲಾಧಿಕಾರಿಯವರನ್ನು ಸದರಿ ಒಕ್ಕೂಟಕ್ಕೆ ವಿಶೇಷಾಧಿಕಾರಿಯಾಗಿ ನೇಮಿಸಲಾಗಿದೆ. ತಪ್ಪಿತಸ್ಥರೆಂದು ಕಂಡು ಬಂದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿ ಕರ್ನಾಟಕ ಹಾಲು ಮಹಾ ಮಂಡಳಿಯ (ಕೆ. ಎಂ. ಎಫ್) ವ್ಯವಸ್ಥಾಪಕ ನಿರ್ದೇಶಕರಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

ಹಾಸನ ಜಿಲ್ಲೆ ದುದ್ದ ಮಂಡಲ ಪಂಚಾಯಿತಿಯಲ್ಲಿ ಜವಹರ್ ರೋಜಗಾರ್ ಯೋಜನೆಯ ಹಣ ದುರುಪಯೋಗ

ಶ್ರೀ (ಡಾ||) ಬಿ. ಶಿವರಾಮು (ಗಂಡಸಿ).—ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ವಾರ್ತಾ ಹಾಗೂ ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ಹಾಸನ ತಾಲ್ಲೂಕು ದುದ್ದ ಮಂಡಲ ಪಂಚಾಯಿತಿಯಲ್ಲಿ ಜವಹರ್ ರೋಜಗಾರ್ ಹಣವನ್ನು ದುರುಪಯೋಗ ಮಾಡಿಕೊಂಡು ಅಂಗಡಿ ಮಳಿಗೆಗಳನ್ನು ನಿರ್ಮಿಸಲಾಗಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಇದಕ್ಕೆ ಯಾವುದೇ ತಾಂತ್ರಿಕ ಮಂಜೂರಾತಿ ನೀಡಿರುವುದಿಲ್ಲ ಮತ್ತು ಮಣ್ಣು ಪರೀಕ್ಷೆಯನ್ನು ಮಾಡಿಸದೆ ಕಟ್ಟಿರುವುದು ಗಮನಕ್ಕೆ ಬಂದಿದೆಯೇ ?

ಇ) ಇದಕ್ಕೆ ಒಟ್ಟು ಎಷ್ಟು ಹೊತ್ತವನ್ನು ವಿರ್ಚು ಮಾಡಲಾಗಿದೆ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು).—

ಅ) ಹಾಸನ ತಾಲ್ಲೂಕು ದುದ್ದ ಮಂಡಲ ಪಂಚಾಯಿತಿಯವರು ಅಂಗಡಿ ಮಳಿಗೆಗಳನ್ನು ನಿರ್ಮಿಸಲು ಕೈಗೊಂಡಿರುವ ಕ್ರಮವು ಸರ್ಕಾರದ ಗಮನಕ್ಕೆ ಬಂದಿದೆ.

ಆ) ದಿನಾಂಕ ೮-೬-೯೦ ರಂದು ಕೊಟ್ಟಿರುವ ತಾಂತ್ರಿಕ ಮಂಜೂರಾತಿಯನ್ನು ಮಣ್ಣು ಪರೀಕ್ಷೆ ಮಾಡಿಸಿಲ್ಲವೆಂದು ದಿನಾಂಕ ೧೨-೬-೯೦ ರಂದು ರದ್ದುಗೊಳಿಸಿರುವುದು ಸರ್ಕಾರದ ಗಮನಕ್ಕೆ ಈಗ ಬಂದಿರುತ್ತದೆ.

ಇ) ಕಾರ್ಯಗತವಾದ ಕಾಮಗಾರಿಯ ವೆಚ್ಚವು ಸುಮಾರು ೧೦,೫೦೦-೦೦ ರೂ. ಗಳಾಗಿರುತ್ತದೆ ಈ ವರೆಗೆ ಯಾವ ಹೊತ್ತವನ್ನು ಪಾವತಿ ಮಾಡಿರುವುದಿಲ್ಲ.

ಹಾಸನ ಡೈರಿಯಲ್ಲಿ ನೌಕರರ ಮಜಾ ಮಾಡಿರುವ ಬಗ್ಗೆ

ಶ್ರೀ(ಡಿ.ಟಿ.ಲಿ) ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಅರಣ್ಯ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹಾಸನದ ಡೈರಿಯಲ್ಲಿ ಎಷ್ಟು ಜನ ನೌಕರರು ಕೆಲಸದಿಂದ ಮಜಾ ಆಗಿದ್ದಾರೆ?

ಆ) ಕೆಲಸದಿಂದ ಮಜಾ ಆದವರ ಹುದ್ದೆ ಮತ್ತು ವಿವರ ಕೊಡುವುದು?

ಇ) ಈ ರೀತಿ ಕೆಲಸದಿಂದ ಮಜಾ ಆಗಲು ಕಾರಣಗಳು ಏನು?

ಈ) ಇವರುಗಳಲ್ಲಿ ಎಷ್ಟು ಜನ ಅಧಿಕಾರಿಗಳು ಮಜಾ ಆರ್ಡರ್ ವಿರುದ್ಧ ಲೇಬರ್ ಕೋರ್ಟ್‌ಗೆ ಯಾವ ಯಾವ ತಾರೀಖಿನಂಗಳಲ್ಲಿ ಪಿರ್ಯಾದು ಸಲ್ಲಿಸಿದ್ದಾರೆ? (ವಿವರ ಕೊಡುವುದು)